ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುವುದಕ್ಕೆ ವಿರೋಧ ಪಕ್ಷಗಳಿವೆ. ಅಂತಹ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ಜೈಲಿಗೂ ಹೋಗುತ್ತಿದ್ದೇವೆ, ಏನು ಬೇಕಾದರೂ ಕೇಸ್ ಹಾಕಿಕೊಳ್ಳಿ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವರ್ಷಾನುಗಟ್ಟಲೆ ಜೈಲಿನಲ್ಲಿ ಇದ್ದು ಬಂದವರು ನಾವು, ಆ ಭಯ ನಮಗಿಲ್ಲ. ಆದರೆ, ವಿಶೇಷವಾಗಿ ನಮಗೆ ಇಲ್ಲಿ ಬಂದಿರುವ ಪ್ರಶ್ನೆಯೇನೆಂದರೆ, ಯಾವುದೇ ಅಧಿಕಾರಿ ಡಿಕ್ಟೇಟರ್‌ಶಿಪ್ ಮಾಡಿದಾಗ ಅಂತಹ ಡಿಕ್ಟೇಟರ್‌ಗೆ ಸೂಪರ್ ಡಿಕ್ಟೇಟರ್ ರಕ್ಷಣೆ ಕೊಡುತ್ತಿದ್ದಾರಲ್ಲ, ಅದಕ್ಕೋಸ್ಕರ ನಮ್ಮ ಧರಣಿ ಎಂಬುದು ಸನ್ಮಾನ್ಯ ಸಿಂಧ್ಯರವರು ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ಯಾರೋ ಒಬ್ಬರಿಗೆ ರಕ್ಷಣೆ ಕೊಟ್ಟು ಸರ್ಕಾರ ಇದನ್ನು ಪ್ರತಿಷ್ಠೆಗೆ ತೆಗೆದುಕೊಳ್ಳುತ್ತಿರುವುದು ತುಂಬಾ ಆಶ್ಚರ್ಯಕರವಾಗಿದೆ. ಹೀಗಾಗಿ, ಸನ್ಮಾನ್ಯ ಯಡಿಯೂರಪ್ಪನವರು ಹೇಳಿರುವ ಪ್ರಕಾರ ಒಂದು ರೀತಿಯಲ್ಲಿ ಸರ್ಕಾರ ದೂಳು ಒರೆಸುವಂಥ ಪ್ರಯತ್ನ ಮಾಡುತ್ತಿದೆ, ಇದನ್ನು ಮಾಡುವುದಕ್ಕೆ ನಾವು ಬಿಡುವುದಿಲ್ಲ. ನೀವು ಆಡಿದ ಆಟವೆಲ್ಲವನ್ನೂ ನೋಡುತ್ತಾ ಕುಳಿತುಕೊಳ್ಳುವುದಕ್ಕೆ ವಿರೋಧ ಪಕ್ಷವಿಲ್ಲ. ಜನಸಾಮಾನ್ಯರ ಪರ ಹೋರಾಟ ಮಾಡುತ್ತೇವೆ, ಧರಣಿ, ಸತ್ಯಾಗ್ರಹ ಮಾಡುತ್ತೇವೆ, ಸಂದರ್ಭ ಬಂದರೆ ಈ ಸರ್ಕಾರವನ್ನು ಹೊರಗಡೆ ಹಾಕುತ್ತೇವೆ. ಇದರಲ್ಲಿ ಅನುಮಾನವೇನೂ ಇಲ್ಲ. ಅದಕ್ಕೋಸ್ಕರ ಈಗಿರುವ ಪ್ರಶ್ನೆಯೇನೆಂದರೆ, ಜನಸಾಮಾನ್ಯರ ಪರವಾಗಿ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ನಮ್ಮ ಶಾಸಕರುಗಳ ಮೇಲೆ ಈ ರೀತಿ ಕೇಸುಗಳನ್ನು ಹಾಕಿರುವ ಸಂದರ್ಭದಲ್ಲಿ ಈ ರೀತಿ ಮಾಡಿರುವುದು ತಪ್ಪೆಂದು ಸರ್ಕಾರ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಮತ್ತು ಈ ಹಿನ್ನೆಲೆಯಲ್ಲಿ ತಪ್ಪು ಮಾಡಿದಂಥ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಿ ಎಂದು ನಾವು ಕೇಳಲಿಲ್ಲ, ಸಸ್ಪೆಂಡ್ ಮಾಡಿ ಎಂದು ಕೇಳಿದೆವು. ಸಸ್ಪೆಂಡ್ ಮಾಡುವುದಕ್ಕೂ ಕೂಡ ಒಪ್ಪದಿದ್ದಾಗ ನಮ್ಮ ನಾಯಕರಾದ ಯಡಿಯೂರಪ್ಪನವರು ಕನಿಷ್ಠ ಪಕ್ಷ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದರು, ಅದಕ್ಕೂ ಬೇಡವೆಂದಾಗ ನಂತರ ಆ ಕುರಿತ ವಿಚಾರಣೆ ನಡಸುವುದಕ್ಕೂ ಇವರು ತಯಾರಿಲ್ಲವೆಂದರೆ, ಈ ಸರ್ಕಾರ ಖಂಡಿತವಾಗಿಯೂ ಡಿಕ್ಟೇಟರ್‌ಗಳಿಗೆ ಬೆಂಬಲ ಕೊಡುತ್ತಿದೆ. ಆದುದರಿಂದ ಪ್ರಜಾಪ್ರಭುತ್ವ ಉಳಿವಿಗೋಸ್ಕರ ನಾವು ಈ ಧರಣಿ ಮಾಡುತ್ತಿದ್ದೇವೆ, ಧರಣಿಯನ್ನು ನಾವೆಲ್ಲರೂ ಮಾಡುವುದಕ್ಕೆ ಇಷ್ಟಪಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಧರಣಿ ಹೂಡಲು ಸದನದ ಬಾವಿಯತ್ತ ತೆರಳಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರನ್ನು ಸಸ್ಪೆಂಡ್ ಮಾಡುವುದಿಲ್ಲ, ಟ್ರಾನ್ಸ್‌ಫರ್ ಸಹ ಮಾಡುವುದಿಲ್ಲವೆಂದರು. ಇನ್ನು ಡಿವಿಜನಲ್ ಕಮೀಷನರ್ ಅವರಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ಏನು ತೊಂದರೆ ಇದೆ? ಇಷ್ಟು ಜನ ಶಾಸಕರುಗಳು ಒತ್ತಾಯ ಮಾಡುತ್ತಿದ್ದರೂ ಡಿವಿಜನಲ್ ಕಮೀಷನರ್ ಅವರಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ಏನಾಗುತ್ತದೆ? ಮಾನ್ಯ ಉಪಾಧ್ಯಕ್ಷರೆ, ನೀವಾದರೂ ಇದರಲ್ಲಿ ಇಂಟರ್‌ವಿನ್ ಆಗಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪ್ರಕರಣದಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಕೇಳಿದರು, ಅದನ್ನು ಕೈಬಿಟ್ಟರು, ಅನಂತರ, ಸಸ್ಪೆನ್‌ಷನ್ ಮಾಡಬೇಕೆಂದು ಕೇಳಿದರು, ಅದಕ್ಕೂ